ಅ) 2001–02, 2002–03, 2003–04 ರ ಸಾಲಿನಲ್ಲಿ ಮೀನುಗಾರಿಕೆಗಾಗಿ ಮಂಜೂರಾತಿ ಆಗಿರುವ ಮನೆಗಳ ಸಂಖ್ಯೆ ಎಷ್ಟು;

ಆ) ಈ ಮನೆ ಕಟ್ಟುವುದಕ್ಕೆ ಸರ್ಕಾರದಿಂದ 2002–03, 2003–04 ರಲ್ಲಿ ಬಿಡುಗಡೆ ಆದ ಹಣದ ವಿವರ ನೀಡುವುದು;

ಇ) ಈ ಮನೆಗಳು ಯಾವ ಹಂತದಲ್ಲಿವೆ; ವಿವರ ನೀಡುವುದು?

ಶ್ರೀ ವಸಂತ್ ವಿ ಸಾಲಿಯಾನ್ (ಮೀನುಗಾರಿಕೆ ಹಾಗು ಬಂದರು ರಾಜ್ಯ ಸಚಿವರು):

ಅ) 2001–02 ಸಾಲಿಗೆ 2000 ಮನೆಗಳು, 2002–03ರ ಸಾಲಿಗೆ 2000 ಮತ್ತು 2003–04 ಸಾಲಿಗೆ 1000 ಮನೆಗಳು, ಒಟ್ಟು 5000 ಮನೆಗಳನ್ನು ಮೀನುಗಾರರಿಗೆ ಮಂಜೂರು ಮಾಡಲಾಗಿದೆ.

ಆ) ಇಲ್ಲಿಯವರೆಗೆ ಹಣ ಬಿಡಿಗಡೆಯಾಗಿರುವುದಿಲ್ಲ.

ಇ) ಹಣ ಬಿಡುಗಡೆಯಾದ ಕಾರಣ ಮನೆಗಳ ನಿರ್ಮಾಣಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ.

## ರಾಜ್ಯದ ಕರಾವಳಿಯಲ್ಲಿ ಸಮುದ್ರ ಕೊರೆತ

3130 (3860) : ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಕರಾವಳಿಯಲ್ಲಿರುವ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರೆತದಿಂದ ಹಾನಿಗೀಡಾದ ವಿವರಗಳನ್ನು ನೀಡುವುದು. (ಪ್ರದೇಶದ ಹೆಸರು, ಎಷ್ಟು ಕಿ.ಮೀ ಉದ್ದ, ಎಷ್ಟು ಮನೆಗಳಿಗೆ ಹಾನಿಯಾಗಿದೆ ಎಂಬುದರ ಬಗ್ಗೆ ವಿವರ ಒದಗಿಸುವುದು?

ಆ) ಸಮುದ್ರ ಕೊರೆತದಿಂದ ಹಾನಿಗೀಡಾದ ಪ್ರದೇಶಗಳ ತುರ್ತು ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆಯೇ? ಹಾಗಿದ್ದರೆ, ವಿವರಗಳನ್ನು ಒದಗಿಸುವುದು

ಇ) ಕಾಮಗಾರಿಗಳಿಗೆ ಸರ್ಕಾರ ಈವರೆಗೆ ಬಿಡುಗಡೆ ಮಾಡಿರುವ ಹಣವೆಷ್ಟು? ಯಾವ ಮೂಲದಿಂದ ಈ ಹಣ ಬಿಡುಗಡೆ ಮಾಡಲಾಗಿದೆ? ವಿವರ ಒದಗಿಸುವುದು?

ಶ್ರೀ ವಸಂತ್ ವಿ ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):

ಅ) 2003ನೇ ವರ್ಷದ ಮಳೆಗಾಲದಲ್ಲಿ ಇಲ್ಲಿಯವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 6 ಸ್ಥಳಗಳಲ್ಲಿ ಒಟ್ಟು 1.15 ಕಿ.ಮೀ ಉದ್ದಕ್ಕೆ ಸಮುದ್ರ ಕೊರೆತ ಸಂಭವಿಸಿದೆ. ಉಡುಪಿ ಜಿಲ್ಲೆಯಲ್ಲಿ 34 ಸ್ಥಳಗಳಿಂದ ಒಟ್ಟು 2.471 ಕಿ.ಮೀ ಉದ್ದಕ್ಕೆ ಸಮುದ್ರ ಕೊರೆತ ಸಂಭವಿಸಿದೆ. ಉತ್ತರ ಕನ್ನಡ ಜಿಲ್ಲೆಯ ಒಟ್ಟು 17 ಸ್ಥಳಗಳಲ್ಲಿ ಒಟ್ಟು 12.200 ಕಿ.ಮೀ ಉದ್ದಕ್ಕೆ ಸಮುದ್ರ ಕೊರೆತ ಸಂಭವಿಸಿದೆ. ಯಾವುದೇ ಮನೆ ಅಥವಾ ಆಸ್ತಿ ಪಾಸ್ತಿಗೆ ಹಾನಿ ಸಂಭವಿಸುವ ಮೊದಲೇ ತುರ್ತು ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. (ವಿವರವನ್ನು ಅನುಬಂಧದಲ್ಲಿ ನೀಡಿದೆ).

ಆ) ಹೌದು.

ಸಮುದ್ರ ಕೊರೆತ ಸಂಭವಿಸಿದ ಸ್ಥಳಗಳಲ್ಲಿ ಕಲ್ಲುಗಳಿಂದ ಮತ್ತು ಮರಳು ಚೀಲಗಳಿಂದ ತುರ್ತು ಸಂರಕ್ಷಣೆ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ. (ವಿವರವನ್ನು ಅನುಬಂಧದಲ್ಲಿ ನೀಡಿದೆ)

ಇ) 2003–04ನೇ ಸಾಲಿಗೆ ಸಮುದ್ರ ಸಂರಕ್ಷಣೆ ಕಾಮಗಾರಿಗಳಿಗಾಗಿ ಲೆಕ್ಕ ಶೀರ್ಷಿಕೆ 4711–02–103–101ರ ಅಡಿಯಲ್ಲಿ ರೂ. 333.74 ಲಕ್ಷ ಅನುದಾನ ನೀಡಲಾಗಿದೆ. ಆದರೆ ತುರ್ತು ಸಮುದ್ರ ಕೊರೆತ ಅಂರಕ್ಷಣಾ ಕಾಮಗಾರಿಗಳಿಗಾಗಿ ಪ್ರತ್ಯೇಕ ಅನುದಾನವನ್ನು ನೀಡಿರುವುದಿಲ್ಲ.

ಅನುಬಂಧ

**2003-04ನೇ ಸಾಲಿನ ಮಳೆಗಾಲದಲ್ಲಿ ತೀವ್ರ ಸಮುದ್ರ ಕೊರೆತ ಸಂಭವಿಸಿದ ಪ್ರದೇಶಗಳಲ್ಲಿ ತುರ್ತು ಕಾಮಗಾರಿ ಕೈಗೊಳ್ಳುತ್ತಿರುವ ಪ್ರದೇಶಗಳ ವಿವರ**

| ಕ್ರ.ಸಂ | ಕಾಮಗಾರಿಯ ಹೆಸರು | ಉದ್ದ | ಬೇಕಾದ ಮೊತ್ತ | ಷರಾ |
|---|---|---|---|---|
| | **ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರ** | | | |
| 1 | ಉಡುಪಿ ತಾಲ್ಲೂಕು ಹೊಡೆ ಗುಜ್ಜರಬೆಟ್ಟು ಪ್ರದೇಶದ ಶ್ರೀ ಉಸ್ಮಾನ್ ಸಾಹೇಬರ ಮನೆ ಹತ್ತಿರ ಚೈ 77.065 ಕಿ.ಮೀ.ನಿಂದ 77.165 ಕಿ.ಮೀ. ವರೆಗೆ ಸಮುದ್ರ ಕೊರೆತ ಉಂಟಾದ ಭಾಗಕ್ಕೆ ಕಲ್ಲುಗಳಿಂದ ತುರ್ತು ಕಾಮಗಾರಿ | 100.00 ಮೀ | 4.00 ಲಕ್ಷ | |
| 2 | ಉಡುಪಿ ತಾಲ್ಲೂಕು ಬ್ರಹ್ಮಾವರ ಹೊಡೆ ಗುಜ್ಜರಬೆಟ್ಟು ಪ್ರದೇಶದ ಹಂಜನಕಾಲೋನಿ ಮನೆಗಳ ಹತ್ತಿರ ಚೈ 77.015 ರಿಂದ 77.065 ಕಿ.ಮೀ ವರೆಗೆ ಸಮುದ್ರ ಕೊರೆತ ಉಂಟಾದ ಭಾಗಕ್ಕೆ ಕಲ್ಲುಗಳಿಂದ ತುರ್ತು ಕಾಮಗಾರಿ | 100.00 ಮೀ | 5.00 ಲಕ್ಷ | |
| 3 | ಉಡುಪಿ ತಾಲ್ಲೂಕು ಬ್ರಹ್ಮಾವರ ಹೊಡೆ ಗುಜ್ಜರಬೆಟ್ಟು ಪ್ರದೇಶದ ಶ್ರೀ ರಾಘವೇಂದ್ರ ಬಜನಾ ಮಂದಿರ ಹತ್ತಿರ ಚೈ 76.925 ರಿಂದ 77.015 ಕಿ.ಮೀ. ವರೆಗೆ ಸಮುದ್ರ ಕೊರತೆ ಉಂಟಾದ ಭಾಗಕ್ಕೆ ಕಲ್ಲುಗಳಿಂದ ತುರ್ತು ಕಾಮಗಾರಿ | 90.00 ಮೀ | 4.00 ಲಕ್ಷ | |
| 4 | ಉಡುಪಿ ತಾಲ್ಲೂಕು ಬ್ರಹ್ಮಾವರ ಹೊಡೆ ಗುಜ್ಜರಬೆಟ್ಟು ಪ್ರದೇಶದ ಶ್ರೀ ರಾಮೋಜಿ ಇವರ ಮನೆ ಹತ್ತಿರ ಚೈ 77.140 ಕಿ.ಮೀ ನಿಂದ 77.170 ಮೀ ವರೆಗೆ ಸಮುದ್ರ ಕೊರೆತ ಉಂಟಾದ ಭಾಗಕ್ಕೆ ಕಲ್ಲುಗಳಿಂದ ತುರ್ತು ಕಾಮಗಾರಿ | 60.00 ಮೀ | 3.00 ಲಕ್ಷ | |
| 5 | ಉಡುಪಿ ತಾಲ್ಲೂಕು ಬ್ರಹ್ಮಾವರ ಹೊಡೆ ಬಸ್ ನಿಲ್ದಾಣದಿಂದ ಸಮುದ್ರ ಬದಿಗೆ ಹೋಗುವ ಕೂಡು ರಸ್ತೆ ಮುಂಭಾಗದಲ್ಲಿ ಚೈ. 77.415 ಕಿ.ಮೀ ನಿಂದ 77.515 ಕಿ.ಮೀ ವರೆಗೆ ಸಮುದ್ರ ಕೊರೆತ ಉಂಟಾದ ಭಾಗಕ್ಕೆ ಕಲ್ಲುಗಳಿಂದ ತುರ್ತು ಕಾಮಗಾರಿ. | 100.00 ಮೀ | 5.00 ಲಕ್ಷ | |

| ಕ್ರ.ಸಂ | ಕಾಮಗಾರಿಯ ಹೆಸರು | ಉದ್ದ | ಬೇಕಾದ ಮೊತ್ತ | ಷರಾ |
|---|---|---|---|---|
| 6 | ಉಡುಪಿ ತಾಲ್ಲೂಕು ಬ್ರಹ್ಮಾವರ ಹೊಡೆ ಪ್ರದೇಶದ ಶ್ರೀ ಜಿ.ಆರ್. ಜತ್ತನ್ನ ಇವರ ಮನೆ ಹತ್ತಿರ ಚೈ 77.750 ಕಿ.ಮೀ. ನಿಂದ 77.830 ಕಿ.ಮೀ ವರೆಗೆ ಸಮುದ್ರ ಕೊರೆತ ಉಂಟಾದ ಭಾಗಕ್ಕೆ ಕಲ್ಲುಗಳಿಂದ ತುರ್ತು ಕಾಮಗಾರಿ | 80.00 ಮೀ | 5.00 ಲಕ್ಷ | |
| 7 | ಉಡುಪಿ ತಾಲ್ಲೂಕು ಬ್ರಹ್ಮಾವರ ಹೊಡೆ ಪ್ರದೇಶದ ಶ್ರೀಮತಿ ಅಕ್ಕಯ್ಯ ಸುವರ್ಣ ಇವರ ಮನೆ ಹತ್ತಿರ ಚೈ 77.700 ರಿಂದ 77.750 ಕಿ.ಮೀ ವರೆಗೆ ಸಮುದ್ರ ಕೊರೆತ ಉಂಟಾದ ಭಾಗಕ್ಕೆ ಕಲ್ಲುಗಳಿಂದ ತುರ್ತು ಕಾಮಗಾರಿ | 50.00 ಮೀ | 3.00 ಲಕ್ಷ | |
| 8 | ಉಡುಪಿ ತಾಲ್ಲೂಕು ಬ್ರಹ್ಮಾವರ ಹೊಡೆ ಪಡುತೋನ್ಸೆಯ ಶ್ರೀ ಬಹುಜನ ಸಾಹೇಬ ಇವರ ಮನೆ ಹತ್ತಿರ ಚೈ. 78.365 ರಿಂದ 78.445 ರಿಂದ ಕಿ.ಮೀ.ವರೆಗೆ ಸಮುದ್ರ ಕೊರೆತ ಉಂಟಾದ ಭಾಗಕ್ಕೆ ಕಲ್ಲುಗಳಿಂದ ತುರ್ತು ಕಾಮಗಾರಿ | 80.00 ಮೀ | 5.00 ಲಕ್ಷ | |
| 9 | ಉಡುಪಿ ತಾಲ್ಲೂಕು ಪಡುತೋನ್ಸೆ ಪೇರ್ಲಕಡಿಯ ಚೈ 78.030 ರಿಂದ 78.080 ಕಿ.ಮೀ. ವರೆಗೆ ಸಮುದ್ರ ಕೊರೆತ ಉಂಟಾದ ಭಾಗಕ್ಕೆ ಕಲ್ಲುಗಳಿಂದ ತುರ್ತು ಕಾಮಗಾರಿ | 50.00 ಮೀ | 5.00 ಲಕ್ಷ | |
| 10 | ಉಡುಪಿ ತಾಲ್ಲೂಕು ಪಡುತೋನ್ಸೆ ಪೇರ್ಲಕಡಿಯ ಚೈ 77.985 ರಿಂದ 78.030 ಕಿ.ಮೀ. ವರೆಗೆ ಸಮುದ್ರ ಕೊರೆತ ಉಂಟಾದ ಭಾಗಕ್ಕೆ ಕಲ್ಲುಗಳಿಂದ ತುರ್ತು ಕಾಮಗಾರಿ | 45.00 ಮೀ | 5.00 ಲಕ್ಷ | |
| 11 | ಉಡುಪಿ ತಾಲ್ಲೂಕು ಕೋಡಿಬೆಂಗ್ರೆ ಸಮುದ್ರ ಅಳವೆ ಬದಿಯಲ್ಲಿ ಸಮುದ್ರ ಕೊರೆತ ಉಂಟಾದ ಭಾಗಕ್ಕೆ ಮರಳು ಚೀಲಗಳ ಬಂಡಿಂಗ್ ಕಾಮಗಾರಿ | 150.00 ಮೀ | 5.00 ಲಕ್ಷ | |

| ಕ್ರ.ಸಂ | ಕಾಮಗಾರಿಯ ಹೆಸರು | ಉದ್ದ | ಬೇಕಾದ ಮೊತ್ತ | ಷರಾ |
|---|---|---|---|---|
| | **ಉಡುಪಿ ವಿಧಾನ ಸಭಾ ಕ್ಷೇತ್ರ** | | | |
| 1 | ಉಡುಪಿ ತಾಲ್ಲೂಕು ಉದ್ಯಾವರ ಪಡುಕೆರೆಯ ಮಾರುತಿ ವ್ಯಾಯಾಮ ಶಾಲೆಯ ಮುಂದೆ ಸಮುದ್ರ ಕೊರೆತ ತಡೆ ತುರ್ತು ಕಾಮಗಾರಿ | 30.00 ಮೀ | 1.75 ಲಕ್ಷ | |
| 2 | ಉಡುಪಿ ತಾಲ್ಲೂಕು ಉದ್ಯಾವರ ಪಡುಕೆರೆಯ ಪಂಡರಿನಾಥ ಭಜನಾ ಮಂದಿರದ ಮುಂದೆ ಸಮುದ್ರ ಕೊರೆತ ತಡೆ ತುರ್ತು ಕಾಮಗಾರಿ | 86.00 ಮೀ | 4.50 ಲಕ್ಷ | |
| 3 | ಉಡುಪಿ ತಾಲ್ಲೂಕು ಮಲ್ಪೆ ಪಡುಕೆರೆ ಪ್ರದೇಶದಲ್ಲಿ ಸಮುದ್ರ ಕೊರೆತ ತಡೆ ತುರ್ತು ಕಾಮಗಾರಿ | 100.00 ಮೀ | 3.75 ಲಕ್ಷ | |
| 4 | ಉಡುಪಿ ತಾಲ್ಲೂಕು ಕಿದಿಯೂರು ಪಡುಕೆರೆ ಪ್ರದೇಶದಲ್ಲಿ ಸಮುದ್ರ ಕೊರೆತ ತಡೆ ತುರ್ತು ಕಾಮಗಾರಿ | 100.00 ಮೀ | 3.75 ಲಕ್ಷ | |
| 5 | ಉಡುಪಿ ತಾಲ್ಲೂಕು ಕುಕುತ್ಪಾಡಿ ಪಡುಕೆರೆ ಪ್ರದೇಶದಲ್ಲಿ ಸಮುದ್ರ ಕೊರೆತ ತಡೆ ತುರ್ತು ಕಾಮಗಾರಿ | 75.00 ಮೀ | 3.00 ಲಕ್ಷ | |
| | **ಕಾಪು ವಿಧಾನ ಸಭಾ ಕ್ಷೇತ್ರ** | | | |
| 1 | ಕಾಪು ವಿಧಾನ ಸಭಾ ಕ್ಷೇತ್ರದಲ್ಲಿ ಬರುವ ಮೂಳೂರು ಪಡುಕೆರೆ ಪ್ರದೇಶದಲ್ಲಿ ಸಮುದ್ರ ಕೊರೆತ ಉಂಟಾದ ಭಾಗಕ್ಕೆ ಕಲ್ಲುಗಳಿಂದ ತುರ್ತು ಕಾಮಗಾರಿ (0–30) | 30.00 ಮೀ | 2.00 ಲಕ್ಷ | |
| 2 | ಕಾಪು ವಿಧಾನ ಸಭಾ ಕ್ಷೇತ್ರದಲ್ಲಿ ಬರುವ ಮೂಳೂರು ಪಡುಕೆರೆ ಪ್ರದೇಶದಲ್ಲಿ ಸಮುದ್ರ ಕೊರೆತ ಉಂಟಾದ ಭಾಗಕ್ಕೆ ಕಲ್ಲುಗಳಿಂದ ತುರ್ತು ಕಾಮಗಾರಿ (30 ರಿಂದ 70 ಮೀ) | 140.00 ಮೀ | 6.00 ಲಕ್ಷ | |

| ಕ್ರ.ಸಂ | ಕಾಮಗಾರಿಯ ಹೆಸರು | ಉದ್ದ | ಬೇಕಾದ ಮೊತ್ತ | ಷರಾ |
|---|---|---|---|---|
| 3 | ಮಟ್ಟು ಪಡುಕೆರೆ ಪ್ರದೇಶದಲ್ಲಿ ಮುಗ್ಗೆರ್ಕಳ ದೇವಸ್ಥಾನದ ಹಿಂದೆ ಸಮುದ್ರ ಕೊರೆತ ತಡೆಯಲು ತುರ್ತು ಕಾಮಗಾರಿ (0 ರಿಂದ 50 ಮೀ) | 50.00 ಮೀ | 1.60 ಲಕ್ಷ | |
| 4 | ಮಟ್ಟು ಪಡುಕೆರೆ ಪ್ರದೇಶದಲ್ಲಿ ಮುಗ್ಗೆರ್ಕಳ ದೇವಸ್ಥಾನದ ಹಿಂದೆ ಸಮುದ್ರ ಕೊರೆತ ಪಡೆಯಲು ತುರ್ತು ಕಾಮಗಾರಿ (50 ರಿಂದ 90 ಮೀ) | 40.00 ಮೀ | 1.50 ಲಕ್ಷ | |
| 5 | ಮಟ್ಟು ಪಡುಕೆರೆ ಪ್ರದೇಶದಲ್ಲಿ ಮುಗ್ಗೆರ್ಕಳ ದೇವಸ್ಥಾನದ ಹಿಂದೆ ಸಮುದ್ರ ಕೊರೆತ ತಡೆಯಲು ತುರ್ತು ಕಾಮಗಾರಿ (100 ರಿಂಜ 120 ಮೀ) | 20.00 ಮೀ | 1.00 ಲಕ್ಷ | |
| | **ಕುಂದಾಪುರ ವಿಧಾನ ಸಭಾ ಕ್ಷೇತ್ರ** | | | |
| 1 | ಕುಂದಾಪುರ ತಾಲ್ಲೂಕು ಕುಂದಾಪುರ ಎಂ ಕೋಡಿ ಎಂಬಲ್ಲಿ ಸಮುದ್ರ ಕೊರೆತ ತಡೆ ತುರ್ತು ಕಾಮಗಾರಿ ಚೈ 0.00 – 125.00 ಮೀವರೆಗೆ | 125.00 ಮೀ | 3.50 ಲಕ್ಷ | |
| 2 | ಕುಂದಾಪುರ ತಾಲ್ಲೂಕು ಕೋಟೆಶ್ವರ ಗ್ರಾಮದ ಹಳೇ ಅಳಿವೆ ಎಂಬಲ್ಲಿ ಸಮುದ್ರ ಕೊರೆತ ತಡೆ ತುರ್ತು ಕಾಮಗಾರಿ ಚೈ 0.00 – 120.00 ಮೀವರೆಗೆ | 120.00 ಮೀ | 3.50 ಲಕ್ಷ | |
| 3 | ಕುಂದಾಪುರ ತಾಲ್ಲೂಕು ಎಂ ಕೋಡಿ ಎಂಬಲ್ಲಿ ಶಾಶ್ವತ ತಡೆಗೋಡೆ ಕುಸಿದು 140 ಮೀಟರ್ ಸಮುದ್ರ ಕೊರೆತ ಉಂಟಾಗಿದೆ. | 140.00 ಮೀ | 7.50 ಲಕ್ಷ | |
| | **ಬೈಂದೂರು ವಿಧಾನ ಸಭಾ ಕ್ಷೇತ್ರ** | | | |
| 1 | ಉಪ್ಪುಂದ ಅಮ್ಮನವರ ತೊಪ್ಪಲು ಜಿಲ್ಲಾ ಪಂಚಾಯತ್ ಹಿರಿಯ ಪ್ರಾಥಮಿಕ ಶಾಲೆಯ ಹಿಂಭಾಗ ದಕ್ಷಿಣದ ಕಡೆಗೆ ಸಮುದ್ರ ತೀರವನ್ನು ಕಲ್ಲುಗಳಿಂದ ಸಂರಕ್ಷಿಸುವ ತುರ್ತು ಕಾಮಗಾರಿ | 75.00 ಮೀ | 4.00 ಲಕ್ಷ | |
| 2 | ಉಪ್ಪುಂದ ಅಮ್ಮನವರ ತೊಪ್ಪಲು ಜಿಲ್ಲಾ ಪಂಚಾಯತ್ ಹಿರಿಯ ಪ್ರಾಥಮಿಕ ಶಾಲೆಯ ಹಿಂಭಾಗ ಉತ್ತರದ ಕಡೆಗೆ ಸಮುದ್ರ ತೀರವನ್ನು ಕಲ್ಲುಗಳಿಂದ ಸಂರಕ್ಷಿಸುವ ತುರ್ತು ಕಾಮಗಾರಿ | 75.00 ಮೀ | 4.00 ಲಕ್ಷ | |

| ಕ್ರ.ಸಂ | ಕಾಮಗಾರಿಯ ಹೆಸರು | ಉದ್ದ | ಬೇಕಾದ ಮೊತ್ತ | ಷರಾ |
|---|---|---|---|---|
| 3 | ಉಪ್ಪುಂದ ಅಮ್ಮನವರ ತೊಪ್ಪಲು ದೀಪಸ್ಥಂಬದ ಹತ್ತಿರ ಸಮುದ್ರ ತೀರವನ್ನು ಕಲ್ಲುಗಳಿಂದ ಸಂರಕ್ಷಿಸುವ ತುರ್ತು ಕಾಮಗಾರಿ (0 ಮೂ ನಿಂದ 50 ಮೂ) | 50.00 ಮೂ | 2.50 ಲಕ್ಷ | |
| 4 | ಉಪ್ಪುಂದ ಅಮ್ಮನವರ ತೊಪ್ಪಲು ದೀಪಸ್ತಂಬದ ದಕ್ಷಿಣಕ್ಕೆ ಸಮುದ್ರ ತೀರವನ್ನು ಕಲ್ಲುಗಳಿಂದ ಸಂರಕ್ಷಿಸುವ ತುರ್ತು ಕಾಮಗಾರಿ (50 ಮೂ ನಿಂದ 100 ಮೂ) | 50.00 ಮೂ | 2.50 ಲಕ್ಷ | |
| 5 | ಉಪ್ಪುಂದ ಅಮ್ಮನವರ ತೊಪ್ಪಲು ದೀಪಸ್ತಂಬದ ಹತ್ತಿರ ಸಮುದ್ರ ತೀರವನ್ನು ಕಲ್ಲುಗಳಿಂದ ಸಂರಕ್ಷಿಸುವ ಕಾಮಗಾರಿ (100 ಮೂ ನಿಂದ 150 ಮೂ.ವರೆಗೆ) | 50.00 ಮೂ | 2.50 ಲಕ್ಷ | |
| 6 | ಉಪ್ಪುಂದ ಅಮ್ಮನವರ ತೊಪ್ಪಲು ಮಂಜಮ್ಮನ ಮನೆ ಹಿಂಭಾಗ ಸಮುದ್ರ ತೀರವನ್ನು ಕಲ್ಲುಗಳಿಂದ ಸಂರಕ್ಷಿಸುವ ತುರ್ತು ಕಾಮಗಾರಿ | 50.00 ಮೂ | 2.50 ಲಕ್ಷ | |
| 7 | ಉಪ್ಪುಂದ ಅಮ್ಮನವರ ತೊಪ್ಪಲು ನಾಗರಾಜ ಖಾರ್ವಿ ಮನೆ ಹಿಂಭಾಗ ಸಮುದ್ರ ತೀರವನ್ನು ಕಲ್ಲುಗಳಿಂದ ಸಂರಕ್ಷಿಸುವ ತುರ್ತು ಕಾಮಗಾರಿ | 50.00 ಮೂ | 2.50 ಲಕ್ಷ | |
| 8 | ಪಡುವರಿ ಗ್ರಾಮದ ಕೋಟೆ ಬಾಗಿಲ ಎಂಬಲ್ಲಿ ಶಂಕರಾಪುರ ಮನೆ ಹತ್ತಿರ ಸಮುದ್ರ ತೀರವನ್ನು ಕಲ್ಲುಗಳಿಂದ ಸಂರಕ್ಷಿಸುವ ತುರ್ತು ಕಾಮಗಾರಿ | 75.00 ಮೂ | 2.50 ಲಕ್ಷ | |
| 9 | ಪಡುವರಿ ಗ್ರಾಮದ ಕೋಟಿ ಬಾಗಿಲು ಎಂಬಲ್ಲಿ ಕೃಷ್ಣಯ್ಯನವರ ಮನೆ ಹತ್ತಿರ ಸಮುದ್ರ ತೀರವನ್ನು ಕಲ್ಲುಗಳಿಂದ ಸಂರಕ್ಷಿಸುವ ತುರ್ತು ಕಾಮಗಾರಿ | 75.00 ಮೂ | 2.50 ಲಕ್ಷ | |
| 10 | ಪಡುವರಿ ದೊಂಬೆ ಹತ್ತಿರ ಗೌರಿಪೂಜಾರ್ತಿ ಮನೆ ಬಳಿ ಸಮುದ್ರ ತೀರವನ್ನು ಮರಳು ಚೀಲಗಳಿಂದ ಸಂರಕ್ಷಿಸುವ ತುರ್ತು ಕಾಮಗಾರಿ | 100.00 ಮೂ | 4.00 ಲಕ್ಷ | |
| | **ಉಡುಪಿ ಜಿಲ್ಲೆ:** | 2471.00 ಮೂ | 114.35 ಲಕ್ಷ | |

| ಕ್ರ.ಸಂ | ಕಾಮಗಾರಿಯ ಹೆಸರು | ಉದ್ದ | ಬೇಕಾದ ಮೊತ್ತ | ಷರಾ |
|---|---|---|---|---|
| | **ದಕ್ಷಿಣ ಕನ್ನಡ ಜಿಲ್ಲೆ – ಉಳ್ಳಾಲ ವಿಧಾನ ಸಭಾ ಕ್ಷೇತ್ರ :** | | | |
| 1 | ಮಂಗಳೂರು ತಾಲ್ಲೂಕು ಉಳ್ಳಾಲ ಕ್ಷೇತ್ರದ ಮುಕ್ಕಚೇರಿಯ ಹಿಲಾಗಿ ನಗರದ ಹತ್ತಿರ ಸಮುದ್ರ ಕೊರೆತ ತಡೆಯಲು ಅಲ್ಲಿನ ತಾತ್ಕಾಲಿಕ ತಡೆಗೋಡೆ | 350.00 ಮೀ | 43.75 ಲಕ್ಷ | |
| 2 | – ಅದೇ – ಸುಭಾಷ್ ನಗರದ ಹತ್ತಿರ ಸಮುದ್ರ ಕೊರೆತ ತಡೆಯಲು ಕಲ್ಲಿನ ತಾತ್ಕಾಲಿಕ ತಡೆಗೋಡೆ ಕಾಮಗಾರಿ | 150.00 ಮೀ | 18.75 ಲಕ್ಷ | |
| 3 | – ಅದೇ – ಮೋಗವೀರಾ ಕಟ್ಟಡದ ಬಳಿ ಸಮುದ್ರ ಕೊರೆತ ತಡೆಯಲು ಕಲ್ಲಿನ ತಾತ್ಕಾಲಿಕ ತಡೆಗೋಡೆ ಕಾಮಗಾರಿ | 350.00 ಮೀ | 10.00 ಲಕ್ಷ | |
| 4 | – ಅದೇ – ಕೋಟೆಮರದಲ್ಲಿ ಸಮುದ್ರ ಕೊರೆತ ತಡೆಯಲು ಮರಳು ಚೀಲದ ಬಂಡಿಂಗ್ ತಡೆಗೋಡೆ ಕಾಮಗಾರಿ | 150.00 ಮೀ | 5.00 ಲಕ್ಷ | |
| | **ಸುರತ್ಕಲ್ ವಿಧಾನ ಸಭಾ ಕ್ಷೇತ್ರ :** | | | |
| 1 | ಮಂಗಳೂರು ತಾಲ್ಲೂಕು ಸುರತ್ಕಲ್ ಕ್ಷೇತ್ರದ ಭಾವಾ ಫಿಶರೀಶ್ ಮುಂಭಾಗದಲ್ಲಿ ಸಮುದ್ರ ಕೊರೆತ ತಡೆಯಲು ಕಲ್ಲಿನ ತಾತ್ಕಾಲಿಕ ತಡೆಗೋಡೆ. | 100.00 ಮೀ | 10.00 ಲಕ್ಷ | |
| 2 | – ಅದೇ – ಮಿತ್ರಪಟ್ಟಣ ಭಜನಾ ಮಂದಿರದ ಮುಂಭಾಗದಲ್ಲಿ ಸಮುದ್ರ ಕೊರೆತ ತಡೆಯಲು ಕಲ್ಲಿನ ತಾತ್ಕಾಲಿಕ ತಡೆಗೋಡೆ | 50.00 ಮೀ | 5.00 ಲಕ್ಷ | |
| | **ಒಟ್ಟು ದಕ್ಷಿಣ ಕನ್ನಡ ಜಿಲ್ಲೆ** | **1150.00 ಮೀ** | **92.50 ಲಕ್ಷ** | |

| ಕ್ರ. ಸಂ. | ಕಾಮಗಾರಿಯ ಹೆಸರು | ಉದ್ದ ಬೇಕಾದ ಮೊತ್ತ | ಷರಾ |
|---|---|---|---|
| | **ಕಾರವಾರ ತಾಲ್ಲೂಕು** | | |
| 1 | ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನ ದೇವಬಾಗ್‌ನಲ್ಲಿ 125 ಮೀಟರ್‌ಗಳ ತುರ್ತು ಸಮುದ್ರ ತಡೆಗೋಡೆ ನಿರ್ಮಾಣ ಕಾಮಗಾರಿ | ರೂ. 15.00 ಲಕ್ಷ | |

| ಕ್ರ. ಸಂ. | ಕಾಮಗಾರಿಯ ಹೆಸರು | ಉದ್ದೇಶಿತ ಮೊತ್ತ | ಷರಾ |
|---|---|---|---|
| 2 | ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನ ದೇವಬಾಗ್‌ನಲ್ಲಿ 125 ಮೀಟರ್‌ಗಳ ತುರ್ತು ಸಮುದ್ರ ತಡೆಗೋಡೆ ನಿರ್ಮಾಣ ಕಾಮಗಾರಿ | ರೂ. 15.00 ಲಕ್ಷ | |
| | **ಅಂಕೋಲಾ ತಾಲ್ಲೂಕು** | | |
| 1 | ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಬೆಳಂಬರದಲ್ಲಿ 125 ಮೀಟರ್‌ಗಳ ತುರ್ತು ಸಮುದ್ರ ತಡೆಗೋಡೆ ನಿರ್ಮಾಣ ಕಾಮಗಾರಿ. | ರೂ. 15.00 ಲಕ್ಷ | |
| 2 | ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಕೇಣಿ ದೇಶಿನಬಾಗ 125 ಮೀಟರ್‌ಗಳ ತುರ್ತು ಸಮುದ್ರ ತಡೆಗೋಡೆ ನಿರ್ಮಾಣ ಕಾಮಗಾರಿ | ರೂ. 15.00 ಲಕ್ಷ | |
| 3 | ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಹಾರವಾಡ ತರಂಗಿಮೇಟ 200 ಮೀಟರ್‌ಗಳ ತುರ್ತು ಸಮುದ್ರ ತಡೆಗೋಡೆ ನಿರ್ಮಾಣ ಕಾಮಗಾರಿ | ರೂ. 30.00 ಲಕ್ಷ | |
| | **ಕುಮಟಾ ತಾಲ್ಲೂಕು** | | |
| 1 | ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಬಾಡಾ ಎಂಬಲ್ಲಿ ತುರ್ತು ಸಮುದ್ರ ತಡೆಗೋಡೆ ನಿರ್ಮಾಣ ಕಾಮಗಾರಿ 175 ಮೀಟರ್ | ರೂ. 25.00 ಲಕ್ಷ | |
| 2 | ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ವನ್ನಳ್ಳಿ ಎಂಬಲ್ಲಿ ತುರ್ತು ಸಮುದ್ರ ತಡೆಗೋಡೆ ನಿರ್ಮಾಣ ಕಾಮಗಾರಿ 150 ಮೀಟರ್ | ರೂ. 20.00 ಲಕ್ಷ | |
| | **ಹೊನ್ನಾವರ ತಾಲ್ಲೂಕು** | | |
| 1 | ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಪಾವಿನ ಕುರ್ವೆ ಎಂಬಲ್ಲಿ ತುರ್ತು ಸಮುದ್ರ ತಡೆ ಕಾಮಗಾರಿ 175 ಮೀಟರ್ | ರೂ. 25.00 ಲಕ್ಷ | |

| ಕ್ರ. ಸಂ. | ಕಾಮಗಾರಿಯ ಹೆಸರು | ಉದ್ದ ಬೇಕಾದ ಮೊತ್ತ | ಷರಾ |
|---|---|---|---|
| 2 | ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಪಾವಿನ ಕುರ್ವೆ ಕೂಡು ರಸ್ತೆ ಎಂಬಲ್ಲಿ ತುರ್ತು ಸಮುದ್ರ ತಡೆ ಕಾಮಗಾರಿ 1.00 ಕಿ.ಮೀ | ರೂ. 10.00 ಲಕ್ಷ | |
| 3 | ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಮಂಕಿ ಎಂಬಲ್ಲಿ ತುರ್ತು ಸಮುದ್ರ ತಡೆ ಕಾಮಗಾರಿ 75 ಮೀಟರ್ | ರೂ. 10.00 ಲಕ್ಷ | |
| | **ಭಟ್ಕಳ ತಾಲ್ಲೂಕು** | | |
| 1 | ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಗೊರಟೆ ಎಂಬಲ್ಲಿ ತುರ್ತು ಸಮುದ್ರ ತಡೆಗೋಡೆ ನಿರ್ಮಾಣ ಕಾಮಗಾರಿ 100 ಮೀಟರ್ | ರೂ. 15.00 ಲಕ್ಷ | |
| 2 | ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಚಾಲಿ ಎಂಬಲ್ಲಿ ತುರ್ತು ಸಮುದ್ರ ತಡೆಗೋಡೆ ನಿರ್ಮಾಣ ಕಾಮಗಾರಿ 75 ಮೀಟರ್ | ರೂ. 10.00 ಲಕ್ಷ | |
| 3 | ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ಹೊನ್ನೆಗದ್ದೆ ಎಂಬಲ್ಲಿ ತುರ್ತು ಸಮುದ್ರ ತಡೆಗೋಡೆ ನಿರ್ಮಾಣ ಕಾಮಗಾರಿ 100 ಮೀಟರ್ | ರೂ. 15.00 ಲಕ್ಷ | |
| | **ಉತ್ತರ ಕನ್ನಡ ಜಿಲ್ಲೆ ಒಟ್ಟು** | **ರೂ. 220.00 ಲಕ್ಷ** | |
| | **ದಕ್ಷಿಣ ಕನ್ನಡ + ಉಡುಪಿ + ಉತ್ತರ ಕನ್ನಡ ಜಿಲ್ಲೆ ಒಟ್ಟು ಸೇರಿ** | **ರೂ. 434.35 ಲಕ್ಷ** | |

## ಮಲ್ಪೆ ಮೀನುಗಾರಿಕಾ ಬಂದರಿನ ವಿಸ್ತೀರ್ಣ

3131 (3861) : ಶ್ರೀ ಸಭಾಪತಿ ಯು.ಆರ್. (ಉಡುಪಿ) : ಮಾನ್ಯ ಮೀನುಗಾರಿಕೆ ಹಾಗು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಲ್ಪೆ ಮೀನುಗಾರಿಕಾ ಬಂದರಿನ ಒಟ್ಟು ವಿಸ್ತೀರ್ಣ ಅಧಿಕೃತವಾಗಿ ಎಷ್ಟು: (ಎಕರೆಗಳಲ್ಲಿ);

ಆ) ಬಂದರು ಇಲಾಖೆಯ ಹೆಸರಿನಲ್ಲಿ ಇರತಕ್ಕ ಇತರ ಪ್ರದೇಶಗಳ ವಿವರಗಳನ್ನು ನೀಡುವುದು;

ಇ) ಈ ಪ್ರದೇಶ ಬಂದರು ಸ್ವಾಧೀನದ ಸ್ಥಳವನ್ನು ಖಾಸಗೀ ವ್ಯಕ್ತಿಗಳಿಗೆ ಕರಾರು ಮೂಲಕ ನೀಡಿದ ವ್ಯಕ್ತಿಗಳ ಹೆಸರು ಮತ್ತು ವಿಸ್ತೀರ್ಣದ ವಿವರಗಳೇನು;

ಶ್ರೀ ವಸಂತ್ ಏ ಸಾಲಿಯಾನ (ಮೀನುಗಾರಿಕೆ ಹಾಗು ಬಂದರು ರಾಜ್ಯ ಸಚಿವರು):

ಅ) ಮಲ್ಪೆ ಮೀನುಗಾರಿಕೆ ಬಂದರಿನ ಒಟ್ಟು ವಿಸ್ತೀರ್ಣವು 56.37 ಎಕರೆಗಳು.

ಆ) ಮಲ್ಪೆ ಬಂದರಿನಲ್ಲಿ ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆಯ ಸ್ವಾಧೀನದಲ್ಲಿ 96.58 ಎಕರೆ ಬಂದರು ಭೂಮಿ ಇದೆ.

ಇ) ಬಂದರು ಸ್ವಾಧೀನದಲ್ಲಿರುವ ಸ್ಥಳದಲ್ಲಿ 73 ವ್ಯಕ್ತಿಗಳಿಗೆ ಒಟ್ಟು 6.50 ಎಕರೆ ಭೂಮಿಯನ್ನು ನೆಲ ಬಾಡಿಗೆ/ವಾರ ಬಾಡಿಗೆ/ತಿಂಗಳ ಬಾಡಿಗೆ ಮತ್ತು ಗುತ್ತಿಗೆ ಮೂಲಕ ನೀಡಲಾಗಿದೆ. ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.